Reg. No. | | | | | | | | | |

**BCMKAL 254**

## IV Semester B.Com. Degree Examination, April/May 2019

*(Credit Based Semester Scheme)*

*(2018-19 Batch onwards)*

**KANNADA**

**ಕನ್ನಡ ಭಾಷೆ**

**ಕನ್ನಡ ಭಾಷಾ ಪತ್ರಿಕೆ – IV**

Shri Dharmasthala Manjunatheswara College of Business Management Library MANGALORE - 575 003

Time : 3 Hours] [Max. Marks : 80

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿ : **(3 × 8 = 24)**

1. ಖಾಂಡವವನ ದಹನದ ಸಂದರ್ಭದಲ್ಲಿ ಅರ್ಜುನನಿಗೆ ಎದುರಾದ ಸಮಸ್ಯೆಗಳಾವುವು? ಅವುಗಳನ್ನು ಆತ ಹೇಗೆ ಎದುರಿಸಿದ? ವಿವೇಚಿಸಿರಿ.

ಅಥವಾ

ಕವಿ ಸಿದ್ಧಲಿಂಗಯ್ಯನವರ ಪ್ರಕಾರ ನಲವತ್ತೇಳರ ಸ್ವಾತಂತ್ರ್ಯವು ಯಾರಿಗೆ ಬಂತು, ಎಲ್ಲಿಗೆ ಬಂತು ಎಂಬುದನ್ನು ವಿವರಿಸಿರಿ.

2. ಶಾಂತಿ ಮತ್ತು ಶಿಕ್ಷಣ ಅನುಷ್ಠಾನದ ಬಗ್ಗೆ ಮಾಲಾಲಾಳ ಸಾಧನೆಯನ್ನು ವಿವರಿಸಿರಿ.

ಅಥವಾ

ಪ್ರತಿಯೊಬ್ಬ ಮನುಷ್ಯನು ಯಾಕೆ ವೈಜ್ಞಾನಿಕ ಅಕ್ಷರಜ್ಞನಾಗಬೇಕಾಗಿದೆ ಎಂಬುದನ್ನು ನಮ್ಮ ನಿಮ್ಮ ಮನಸ್ಸಿನ ನೋವಿನ ಕಥೆಗಳು – ಈ ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

3. ದಂಡಕಾರಣ್ಯದಲ್ಲಿ ರಾಮ-ಸೀತೆ ಮತ್ತು ಲಕ್ಷ್ಮಣರಿಗೆ ಎದುರಾದ ಸಂದರ್ಭ ಸನ್ನಿವೇಶಗಳಾವುವು? ವಿವರಿಸಿರಿ.

ಅಥವಾ

ಅತ್ರಿಯಿಂದ ಅಗಸ್ತ್ಯರವರೆಗೆ ರಾಮನ ಪ್ರಯಾಣದ ಸನ್ನಿವೇಶವನ್ನು ವಿವರಿಸಿರಿ.



P.T.O.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(3 × 5 = 15)**

1. 'ಮಂತ್ರವೊಂದು ನನ್ನ ಬಳಿ ಇದ್ದಿದ್ದರೆ' ಕವನದಲ್ಲಿ ವ್ಯಕ್ತವಾಗುವ ಕವಿಯ ಸಾಮಾಜಿಕ ಕಳಕಳಿಯನ್ನು ನಿರೂಪಿಸಿರಿ.

ಅಥವಾ

'ಮಿಥಿಲೆ' ಕವನದ ಆಶಯವನ್ನು ವಿವರಿಸಿರಿ.

2. ಮೂರ್ತಿಯವರ ಕಾಯಿಲೆಯ ಬಗ್ಗೆ ಮೋಹನ ಮತ್ತು ಮನೆಯವರು ತೆಗೆದುಕೊಂಡ ಎಚ್ಚರಿಕೆ ಮತ್ತು ಚಿಕಿತ್ಸಾಕ್ರಮಗಳ ಬಗ್ಗೆ ಬರೆಯಿರಿ.

ಅಥವಾ

ಕ್ರೆಡಿಟ್ ಕಾರ್ಡ್‌ನ ಅನುಕೂಲ ಮತ್ತು ಅನಾನುಕೂಲಗಳನ್ನು ವಿವರಿಸಿರಿ.

3. ವಿರಾಧನ ವಧೆಯ ಸಂದರ್ಭವನ್ನು ವಿವರಿಸಿರಿ.

ಅಥವಾ

ವಾತಾಪಿ–ಇಲ್ವಲರ ಕಥೆಯನ್ನು ವಿವರಿಸಿರಿ.

III. **ಒಂದು** ಪದ್ಯದ ಸಂದರ್ಭ ಹಾಗೂ ಭಾವಾರ್ಥದೊಂದಿಗೆ ಸ್ವಾರಸ್ಯವನ್ನು ವಿವರಿಸಿರಿ : **(1 × 5 = 5)**

1. ಇಂತಪ್ಪ ಬನಮನಿದನಿ

ನ್ನೆಂತ ನಲಿನನೂಡಲೆಂದು ಪೂಣ್ದಯ್ ಮುಂ ಪೂ।

ಣ್ದಂ ತೂಡು ಪೂಡು ಶಿತಶರ

ಸಂತತಿಯಂ ಬಿಲ್ಲೊಳೇಕೆ ನೀಂ ತಡೆದಿರ್ಪಯ್॥

ಅಥವಾ

2. ಅಮ್ಮ ಎತ್ತಿಡುತ್ತಾಳೆ ಕಾಲಾಂತರದಿ ಕಾಪಿಟ್ಟು

ಗಂಡ ಮಕ್ಕಳು ಮೊಮ್ಮಕ್ಕಳು ನೂರಾರು ಮೈಲಿ

ದೂರವಿದ್ದೂ ಚದರ ಚದರದಲಿ ಬಿಡದೆ

ಪದರ ಪದರದಲಿ ಬರೆದ ಪತ್ರಗಳ ಕಂತೆಯನ್ನು

ಮಂಚದ ಕಾಲಡಿಗೆ ತಳ್ಳಿದ ಟ್ರಂಕಿನಲ್ಲಿ

ಓದಿ ಮುಗಿಸಲಾಗದ ನೂರಾರು ಎತ್ತರ ಬಿತ್ತರಗಳ

ನೆನೆದು ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಬರಿ .......... ಮೌನವಾಗುತ್ತಾಳೆ.

IV. (ಅ) **ಎರಡು** ಪ್ರಶ್ನೆಗಳಿಗೆ ಸಂದರ್ಭ ಸ್ವಾರಸ್ಯ ಬರೆಯಿರಿ : **(2 × 4 = 8)**

1. ಎಲ್ಲೆಲ್ಲಿ ನೋಡಿದರೂ, ಕೊಡಗಳೆಲ್ಲ ಖಾಲಿ ಖಾಲಿ
2. ಜಾತಕ ನೋಡಬೇಡ, ಪಾತಕವ ಮಾಡಬೇಡ
3. ತೆನೆ ತುಂಬಿದ ಗದ್ದೆಯಂಚಿನ ತಂಗಾಳಿಯಾಗುತ್ತಾಳೆ
4. ಗಿಳಿಗಳಿವೆ, ಇಲ್ಲ ಪಂಜರದ ನೋವು

(ಆ) **ಎರಡರ** ಕುರಿತು ಟಿಪ್ಪಣಿ ಬರೆಯಿರಿ : **(2 × 4 = 8)**

1. ಸೋಮನಾಥ
2. ಟೈಸನ್ ಬಾಕ್ಸಿಂಗ್
3. ಪ್ರೊ. ಜಿ.ಟಿ. ನಾರಾಯಣ ರಾವ್
4. ಡಾ. ಸಿ.ಆರ್. ಚಂದ್ರಶೇಖರ್

(ಇ) **ಎರಡರ** ಕುರಿತು ಟಿಪ್ಪಣಿ ಬರೆಯಿರಿ : **(2 × 4 = 8)**

1. 'ಶ್ರೀ ರಾಮಾಯಣ ದರ್ಶನಂ'
2. ಅನಸೂಯೆ
3. ವಾತಾಪಿ – ಇಲ್ವಲ
4. ಮಾಂಡಕರ್ಣಿ

Shri Dhar... Manjunatha
College of B... Management
MANGALORE - 575 0

V. ಒಂದು ವಾಕ್ಯದಲ್ಲಿ ಉತ್ತರಿಸಿರಿ : **(12 × 1 = 12)**

1. ಶಚೀಪತಿ ಎಂದರೆ ಯಾರು?
2. ಸು.ರಂ. ಎಕ್ಕುಂಡಿಯವರ ಹುಟ್ಟೂರು ಯಾವುದು?
3. 'ಮಾತು – ಅರ್ಥ – ಮೌನ' ಈ ಪದ್ಯವನ್ನು ಬರೆದ ಕವಿ ಯಾರು?
4. ಕವಿ ಸಿದ್ಧಲಿಂಗಯ್ಯನವರ ಪ್ರಕಾರ ಯಾರ ಪಾಲಿಗೆ ನಲವತ್ತೇಳರ ಸ್ವಾತಂತ್ರ್ಯ ಬಂತು?
5. 'ಪಾಲು' ಕಥೆಯ ಸೋಮನಾಥನ ಅಮ್ಮನ ಹೆಸರೇನು?
6. ಮಾಲಾಲ ಹೇಳುವಂತೆ ಯಾವ ಕ್ಷಿಪಣಿ ದಾಳಿಯಿಂದ ಮಕ್ಕಳು ಸಾಯುತ್ತಿದ್ದಾರೆ?
7. 'ಹುಡುಗಿಯನ್ನು ಕೆಣಕಿದ ಮುದುಕ' ಲೇಖನದ ಸಾಕಮ್ಮ ಯಾರ ಹೆಂಡತಿ?
8. ಅನಾರೋಗ್ಯ ಅಪಘಾತಗಳಿಗಾಗಿ ಯಾವ ಅವಧಿಯ ಸಾಲವನ್ನು ಪಡೆಯಬಹುದು?
9. ಸೀತೆಗೆ ಪತಿವ್ರತಾ ಮಹಿಮೆಯನ್ನು ಉಪದೇಶಿಸಿದವರು ಯಾರು?
10. ರಾಮಾಯಣ ದರ್ಶನಂ ಕಾವ್ಯವು ಯಾವ ಛಂದಸ್ಸಿನಲ್ಲಿದೆ?
11. ಇಲ್ವಲ – ವಾತಾಪಿಯರ ಕಥೆಯನ್ನು ಯಾರು ಯಾರಿಗೆ ಹೇಳಿದರು?
12. ಪಂಚವಟಿಯು ಯಾವ ನದೀ ತೀರದಲ್ಲಿದೆ?